1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,  ನ್ಯಾಯಾಧೀಶರವರ

ನ್ಯಾಯಾಲಯ ,  ಚನ್ನಗಿರಿ .

ಸಿಸಿ ನಂ.**545/2023**

ಹೆಸರುಃ  ಎಂ.ಆರ್.  ರಾಮಾನುಜ                                                                 ಚಾಸಾಃ 7

ತಂದೆಃ ರಂಗಯ್ಯ                                                                                       ಪ್ರಾಸಾ:  6

ವಯಸ್ಸುಃ  48

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ   ಮುದ್ದೇನಹಳ್ಳಿ ಗ್ರಾಮ ,  ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 31–10–2023 ರಂದು ಪ್ರಮಾಣ ವಚನ

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು  ನೀಡಿರುವುದಿಲ್ಲ . ಆರೋಪಿತರನ್ನು ನಾನು ನೋಡಿರುವುದಿಲ್ಲ . ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ .

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ  ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,  ಹೇಳಿಕೆಯನ್ನು  ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 13-01-2023 ರಂದು ಮಧ್ಯಾಹ್ಷ 4.00 ಸಮಯದಲ್ಲಿ ನಾನು ನಮ್ಮ ತೋಟಕ್ಕೆ ನೀರು ಬಿಡಲು ಹೋಗಿದ್ದು --------ನಾನು ಆರೋಪಿತರನ್ನು ನೋಡಿರುತ್ತೇನೆ ಮತ್ತೇ ನೋಡಿದರೆ ಗುರುತಿಸುತ್ತೇನೆ ಎಂದು ಈಗ ಓದಿ ಹೇಳಿ ಕೇಳಿದಂತೆ ದಿನಾಂಕಃ 16-01-2023 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . ಅಲ್ಲಗಳೆದ ಹೇಳಿಕೆಯನ್ನು ನಿಪಿ. 13 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿತರ ಪರ ವಕೀಲರಿಂದ - ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**545/2023**

ಹೆಸರುಃ ಮಧು ಚಾಸಾಃ 5

ತಂದೆಃ ರುದ್ರಪ್ಪ ಫ್ರಾಸಾ: 5

ವಯಸ್ಸುಃ 33

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಮುದ್ದೇನಹಳ್ಳಿ ಗ್ರಾಮ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 31-10-2023 ರಂದು ಪ್ರಮಾಣ ವಚನ

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಸಾಕ್ಷಿಯು ಈಗ ಅಮಾನತ್ತು ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗಾಗಲೇ ನಿಶಾನೆ ಪಿ 4 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 4 (ಸಿ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಸಹಿಯನ್ನು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ಈಗಾಗಲೇ

ನಿ ಪಿ 5 ಎಂದು ಗುರುತಿಸಲಾಗಿದೆ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಭಾವಚಿತ್ರದಲ್ಲಿ ನಿಂತಿರುತ್ತೇನೆ .

ಸಾಕ್ಷಿಯು ಈಗ ಅಮಾನತ್ತು ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗಾಗಲೇ ನಿಶಾನೆ ಪಿ 9 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 9 (ಬಿ ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಸಹಿಯನ್ನು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ಈಗಾಗಲೇ ನಿ ಪಿ 10 ಎಂದು ಗುರುತಿಸಲಾಗಿದೆ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಭಾವಚಿತ್ರದಲ್ಲಿ ನಿಂತಿರುತ್ತೇನೆ .

ಸಾಕ್ಷಿಯು ಈಗ ಅಮಾನತ್ತು ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗಾಗಲೇ ನಿಶಾನೆ ಪಿ 11 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 11 (ಬಿ ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಸಹಿಯನ್ನು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ಈಗಾಗಲೇ ನಿ ಪಿ 12 ಎಂದು ಗುರುತಿಸಲಾಗಿದೆ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಭಾವಚಿತ್ರದಲ್ಲಿ ನಿಂತಿರುತ್ತೇನೆ .

ಆರೋಪಿತರನ್ನು ನಾನು ನೋಡಿರುವುದಿಲ್ಲ .

**(ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗಳಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಮಹಜರ್ ಗಳನ್ನು ನೋಡಲಾಗಿ ಸಾಕ್ಷಿಯು ಮಹಜರ್ ಗಳಿಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿನಾಂಕಃ 14-01-2023 ರಂದು ಚನ್ನಗಿರಿ ಪೊಲೀಸ್ ಠಾಣೆಯ ಚಾಸಾ 13 ರವರ ಕೊಠಡಿಯಲ್ಲಿ ಬೆಳಗ್ಗೆ 11.30 ಗಂಟೆಯಿಂದ 12.00 ಗಂಟೆಯವರೆಗೆ , ಪೊಲೀಸರು ನನ್ನ , ಚಾಸಾ 4 , 1,9 ರವರ ಸಮಕ್ಷಮ ನಿ ಪಿ 4 ರಂತೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ . ನಿಪಿ 4 ನ್ನು ಜರುಗಿಸುವ ಕಾಲಕ್ಕೆ ನನ್ನ ಜೊತೆ ಚಾಸಾ 4,1,9 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಿ ಪಿ 4 ನ್ನು ಜರುಗಿಸುವ ಸಮಯದಲ್ಲಿ ಪೊಲೀಸರು ಒಂದು ಸರವನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ .

ನಿ ಪಿ 4 ನ್ನು ಜರುಗಿಸುವ ಸಮಯದಲ್ಲಿ ನಿ ಪಿ 5 ರಂತೆ ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಪೋಟೋದಲ್ಲಿ ನಿಂತಿರುತ್ತೇನೆ .

ದಿನಾಂಕಃ 14-01-2023 ರಂದು 1 ಮತ್ತು 2 ನೇ ಆರೋಪಿತರು ತೋರಿಸಿದ ಸ್ಥಳವಾದ ಬಸವೇಶ್ವರ ನಗರದ ಮಣ್ಣಮ್ಮ ಪ್ರೌಢಶಾಲೆಗೆ ಹೋಗುವ ಅಡ್ಡರಸ್ತೆಯ ಕ್ರಾಸ್ ಬಳಿ ಬೆಳಗ್ಗೆ 10.15 ಗಂಟೆಯಿಂದ 10.50 ಗಂಟೆಯವರೆಗೆ , ಪೊಲೀಸರು ನನ್ನ ಚಾಸಾ 4 ಹಾಗೂ 1 ಮತ್ತು 2 ನೇ ಆರೋಪಿಯ ಸಮಕ್ಷಮ ನಿ ಪಿ 9 ರಂತೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ . ನಿಪಿ 9 ನ್ನು ಜರುಗಿಸುವ ಕಾಲಕ್ಕೆ ನನ್ನ ಜೊತೆ 2 ನೇ ಆರೋಪಿ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು , 1 ನೇ ಆರೋಪಿ ಮತ್ತು ಚಾಸಾ 4 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಿ ಪಿ 9 ನ್ನು ಜರುಗಿಸುವ ಸಮಯದಲ್ಲಿ1 ನೇ ಆರೋಪಿಯು ಹಾಜರುಪಡಿಸಿದ ಒಂದು ಸರ ಹಾಗೂ ಮೊಬೈಲ್ ನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ .

ನಿ ಪಿ 9 ನ್ನು ಜರುಗಿಸುವ ಸಮಯದಲ್ಲಿ ನಿ ಪಿ 10 ರಂತೆ ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಪೋಟೋದಲ್ಲಿ ನಿಂತಿರುತ್ತೇನೆ .

ದಿನಾಂಕಃ 14-01-2023 ರಂದು 1 ನೇ ಆರೋಪಿಯು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ , ಪೊಲೀಸರು ನನ್ನ ಚಾಸಾ 4 ಹಾಗೂ 1 ನೇ ಆರೋಪಿಯ ಸಮಕ್ಷಮ ನಿ ಪಿ 11 ರಂತೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ . ನಿಪಿ 11 ನ್ನು ಜರುಗಿಸುವ ಕಾಲಕ್ಕೆ ನನ್ನ ಜೊತೆ 1 ನೇ ಆರೋಪಿ ಮತ್ತು ಚಾಸಾ 4 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಿ ಪಿ 11 ನ್ನು ಜರುಗಿಸುವ ಸಮಯದಲ್ಲಿ 1 ನೇ ಆರೋಪಿಯು ಹಾಜರುಪಡಿಸಿದ ಒಂದು ಕುಡುಗೋಲನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ .

ನಿ ಪಿ 11 ನ್ನು ಜರುಗಿಸುವ ಸಮಯದಲ್ಲಿ ನಿ ಪಿ 12 ರಂತೆ ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ಪೋಟೋದಲ್ಲಿ ನಿಂತಿರುತ್ತೇನೆ . ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿತರ ಪರ ವಕೀಲರಿಂದ - ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**